‘ಹೆಣ್ಣುಮಕ್ಕಳಿಗಲ್ಲ’ ಎಂದು ಅಘೋಷಿತವಾಗಿ ನಿರ್ಬಂಧಿಸಲಾದ ಹಲವು ಕ್ಷೇತ್ರಗಳಲ್ಲಿ ಫೋಟೊಗ್ರಫಿ ಕೂಡ ಒಂದು. ದೊಡ್ಡ ದೊಡ್ಡ ಲೆನ್ಸ್ ಹೊತ್ತುಕೊಂಡು ಬೆಟ್ಟ ಗುಡ್ಡ ಸುತ್ತಾಡುವುದು, ಮದುವೆ ಗದ್ದಲದಲ್ಲಿ ಫೋಟೊ ಕ್ಲಿಕ್ಕಿಸುವುದು, ಹೊತ್ತುಗೊತ್ತಿಲ್ಲದೆ ಬೀದಿಗಳಲ್ಲಿ ಅಲೆಯುವುದು – ಇವೆಲ್ಲ ಹೆಣ್ಮಕ್ಕಳ ಕೈಮೀರಿದ್ದು ಎಂಬ ಭಾವವೇ ಇಂದಿಗೂ ಇದೆ. ಆದರೆ ಈ ಜಡಮನಸ್ಥಿತಿಗೆ ವೈರುಧ್ಯವೆನ್ನುವ ಹಾಗೆ ಫೋಟೊಗ್ರಫಿ ಬೆಳವಣಿಗೆಯ ಮೊದಲ ಹೆಜ್ಜೆಯಿಂದಲೇ ಹೆಣ್ಣಿನ ರುಜುವಿದೆ. ಛಾಯಾಗ್ರಹಣ ಒಂದು ಕಲಾಪ್ರಕಾರವಾಗಿ ಬೆಳೆಯುವಲ್ಲಿ ಮಹಿಳೆಯ ಕೊಡುಗೆ ದೊಡ್ಡದಿದೆ. ಆದರೆ ಅದನ್ನು ಗುರ್ತಿಸುವ ಮಸೂರ ನಮ್ಮ ಸಮಾಜದ ಕಣ್ಣಿನಲ್ಲಿ ಇಲ್ಲವಷ್ಟೆ. ಈ ಹಿನ್ನೆಲೆಯಲ್ಲಿ ಜಗತ್ತಿನ ಛಾಯಾಪಥದಲ್ಲಿ ಮಹಿಳಾ ಫೋಟೊಗ್ರಾಫರ್ಸ್ ಹೆಜ್ಜೆಗುರುತುಗಳ ಜೊತೆಗೆ ಸಮಕಾಲೀನವಾಗಿ ಫೋಟೊಗ್ರಫಿಯ ವಿವಿಧ ಪ್ರಕಾರಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರ ಅನುಭವದ ಮಾತುಗಳ ಸೇರಿಸುವ ಪ್ರಯತ್ನ ಈ ವಾರದ ‘ಸುಧಾ’ ವಿಶೇಷ.

■ ಪದ್ಮನಾಭ ಭಟ್

# ಹೆಣ್ಣಿನ ಕಣ್ಣು



## ಫೋಟೊಗ್ರಫಿ ಮಹಿಳಾ ಮೊಹರು